**ದಿನಾಂಕಃ 23-01-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃಃ ವಾದಿ ಪರ ವಕೀಲರಾದ ಶ್ರೀ ಕೆಜಿಎಂ ರವರಿಂದಃಃ**

ನಿಡಿ-5 ಪಹಣಿಯನ್ನು ನಾನೇ ನ್ಯಾಯಾಲಯಕ್ಕೆ ನೀಡಿರುತ್ತೇನೆ. ನಿಡಿ-5 ಪಹಣಿಯ ಕಲಂ 9 ಮತ್ತು 12 ರಡಿಯಲ್ಲಿ ವಾದಿ ಹೆಸರಾದ ಎಸ್. ಸರೋಜಮ್ಮ ರವರಿಗೆ 0.09.11 ಗುಂಟೆ ಹಕ್ಕು ಮತ್ತು ಸ್ವಾಧೀನ ಇರುತ್ತದೆ ಎಂದರೆ ಸರಿ. ಎಂ.ಆರ್ 13/14-15 ನ್ನು ನಾನು ಯಾವುದೇ ರೆವಿನ್ಯೂ ನ್ಯಾಯಾಲಯದಲ್ಲಿ ಪ್ರಶ್ನಿಸಿ ದಾವೆ ಹೂಡಿರುವುದಿಲ್ಲ. ಈ ದಾವಾಪತ್ರದಲ್ಲಿ ಏನೇನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಸಾಕ್ಷಿಯು ಮುಂದುವರೆದು ನನಗೆ ಆಂಗ್ಲ ಭಾಷೆಯು ಓದಲು ಮತ್ತು ಬರೆಯಲು ಬರುವುದಿಲ್ಲ ಆದ ಕಾರಣ ನಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದಲು ಮತ್ತು

ಬರೆಯಲು ಬರುತ್ತದೆ. ನನ್ನ ಹೆಸರನ್ನು ನಾನು ಇಂಗ್ಲೀಷ್ ಭಾಷೆಯಲ್ಲಿ ಮಾಡಿರುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದೃಢೀಕೃತ ನಕಲನ್ನು ತೋರಿಸಿ ದೃಢೀಕೃತ ನಕಲಿನಲ್ಲಿನ ಎಸ್.ಮಲ್ಲರೆಡ್ಡಿ ಎಂದು ಸಹಿ ಇರುವುದು ನಿಮ್ಮದೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಹೇಳಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ-6 ಎಂದು ಗುರುತಿಸಲಾಯಿತು (ಎರಡು ಹಾಳೆಗಳು).

ಎಫ್.ಡಿ.ಪಿ ಪ್ರಕರಣದಲ್ಲಿ ದಾವಾಸ್ವತ್ತುಗಳನ್ನು ಡಿಕ್ರಿಯ ಆದೇಶದಂತೆ ವಿಂಗಡಣೆ ಮಾಡಲು ನನಗೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ನಿಪಿ-6 ಸರ್ವೆ ನೋಟೀಸಿನ ಆಧಾರದ ಮೇಲೆ ಸರ್ವೇಯರು ದಾವಾಸ್ವತ್ತಿನ ಹತ್ತಿರ ಬಂದಿರುತ್ತಾರೆ ಮತ್ತು ಸರ್ವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತುಗಳನ್ನು ಡಿಕ್ರಿಯ ಅನುಗುಣವಾಗಿ ಸರ್ವೇಯರು ವಿಭಾಗ ಮಾಡಿರುತ್ತಾರೆ ಆ ಸಮಯದಲ್ಲಿ ಒಂದು ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರಿಗೆ ನಾನು ಒಂದು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ಮಹಜರ್ ನ ದೃಢೀಕೃತ ನಕಲನ್ನು ತೋರಿಸಿ ಅದರಲ್ಲಿ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಯಾವುದೇ ಜಮೀನನ್ನು ಸರ್ವೆ ಮಾಡಿರುವುದಿಲ್ಲ ಮತ್ತು ಸರ್ವೇಯರು ನಾವು ಬಂದಿರುವ ಕಾರಣಕ್ಕಾಗಿ ಸಹಿ ಮಾಡು ಎಂದು ಹೇಳಿದ ಮೇರೆಗೆ ನಿಪಿ-7 ಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಸಾಮಾನ್ಯವಾಗಿ ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಫ್.ಡಿ.ಪಿ 47/2010 ರಲ್ಲಿ ನ್ಯಾಯಾಲಯದ ಆದೇಶದಂತೆ ನ್ಯಾಯಾಲಯದ ನಿಯೋಗಿಯಾದ ಸರ್ವೇಯರು ಸರ್ವೆ ನಂ.127

ಬಳಿ ಬಂದು ಸದರಿ ಜಮೀನನ್ನು ನ್ಯಾಯಾಲಯದ ಆದೇಶದಂತೆ ವಿಭಜಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಿಪಿ-7 ರಂತೆ ಸರ್ವೆ ಅಧಿಕಾರಿಗಳು ಒಂದು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಎಲ್ಲಾ ಅಂಶಗಳು ನನಗೆ ಸಂಪೂರ್ಣ ತಿಳಿದಿದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಫ್‌ಡಿಪಿ ಪರಕರಣದಲ್ಲಿ ನ್ಯಾಯಾಲಯದ ನಿಯೋಗಿಯು ನ್ಯಾಯಾಲಯದ ಆದೇಶದಂತೆ ಸರ್ವೆ ನಂ.27 ಜಮೀನನ್ನು ವಿಭಜಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಜಣೆಯು ನ್ಯಾಯಾಲಯದ ಆಜ್ಞೆಯಂತೆ ದಿನಾಂಕ 23-10-2014 ರಂದು ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.127 ಜಮೀನಿನ ಪೈಕಿ 0.09.12 ಗುಂಟೆ ಜಮೀನು ವಾದಿಯ ಹೆಸರಿಗೆ ಖಾತೆ ಮತ್ತು ಪಹಣಿಯನ್ನು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಎಫ್‌ಡಿಪಿ ಯಲ್ಲಿ ಹೊರಡಿಸಿರುವ ಅಂತಿಮ ಡಿಕ್ರಿಯು ಉಪ ನೊಂದಣಾಧಿಕಾರಿಯವರ ಕಛೇರಿಯಲ್ಲಿ ನೊಂದಾವಣೆಗೊಂಡು ನೊಂದಾವಣೆ ಮೇರೆಗೆ ರೆವಿನ್ಯೂ ದಾಖಲಾತಿಗಳು ವಾದಿಯ ಹೆಸರಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ದಿನಾಂಕ 23-10-2014 ರಿಂದ ದಾವಾಸ್ವತ್ತಿನಲ್ಲಿ ವಾದಿಯೇ ನೈಜ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ನೆಡವಾಗಿದ್ದ ಸರ್ವೆ ಕಲ್ಲುಗಳನ್ನು ದಿನಾಂಕ 04-03-2015 ರಂದು ಕಿತ್ತು ಹಾಕಲು ನಾನು ಪ್ರಯತ್ನಿಸಿದ ಮೇರೆಗೆ ಈ ದಾವೆಗೆ ಸಕಾರಣ ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ನನಗಾಗಲೀ ನನ್ನ ಅಣ್ಣ ತಮ್ಮಂದಿರಾಗಲೀ ಮತ್ತು ನನ್ನ ಕುಟುಂಬದ ಇತರೆ ಯಾವುದೇ ಸದಸ್ಯರಾಗಲೀ ಯಾವುದೇ ರೀತಿಯಾದ ಹಕ್ಕು, ಭಾದ್ಯತೆ ಮತ್ತು

ಸ್ವಾಧೀನಾನುಭವ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಈಗಾಗಲೇ ವಾದಿಯ ಸ್ವಾಧೀನದಲ್ಲಿದರೂ ಸಹಾ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಉಚ್ಚ ನ್ಯಾಯಾಲಯದಲ್ಲಿ ಪ್ರಥಮ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ-6 ಮತ್ತು 7 ಕಂದಾಯ ತೆರಿಗೆ ರಸೀದಿಗಳು ಮತ್ತು ಖಾತಾ ಸರ್ಟಿಫಿಕೇಟ್ ದಾವಾಸ್ವತ್ತಿಗೆ ಸಂಬಂಧಿಸದ ದಾಖಲೆಗಳಾಗಿರುತ್ತದೆ ಎಂದರೆ ಸರಿಯಲ್ಲ. ನಿಡಿ-6 ಮತ್ತು 7 ದಾಖಲೆಗಳನ್ನು ನಾನು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯಕ್ಕೆ ದೂರವಾದ ಸಂಗತಿ ಇದ್ದು ಪ್ರಕರಣಕ್ಕಾಗಿ ನಾನೇ ಆ ರೀತಿಯಾದ ಸುಳ್ಳು ಸಂಗತಿಯಾದ ನ್ಯಾಯಾಲಯದ ಮುಂದೆ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆ ಸಲುವಾಗಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿನ ಎಲ್ಲಾ ಸಂಗತಿಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿಯ ಮರಣದ ನಂತರ ವಾದಿಯ ವಾರಸುದಾರರು ದಾವಾಸ್ವತ್ತಿನ ಕಾನೂನುಬದ್ಧ ಮಾಲೀಕರಾಗಿ ಸ್ವಾಧೀನಾನುಭವ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾಸ್ವತ್ತಿನ ಮೇಲೆ ವಾದಿಗೆ ಇರುವ ಸ್ವಾಧೀನಾನುಭವಕ್ಕೆ ಅಡ್ಡಿಪಡಿಸಲು ಪ್ರಯತ್ನಿಸಿದ ಮೇರೆಗೆ ವಾದಿಯು ನನ್ನ ವಿರುದ್ಧ ನಿರ್ಬಂಧಕಾಜ್ಞೆ ಕೋರಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಭೂಮಿಯು ಯಾವ ರೀತಿ ಇತ್ತೋ ಅದೇ ರೀತಿಯಾಗಿ ಇರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಮೇಲೆ ನನಗೆ ಯಾವುದೇ ರೀತಿಯಾದ ಹಕ್ಕು ಮತ್ತು ಸ್ವಾಧೀನಾನುಭವ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನಾನು ನನ್ನ ಮಗಳ ಹೆಸರಿಗೆ ಕೊಡಲು ನನಗೆ

ಯಾವುದೇ ರೀತಿಯಾದ ಕಾನೂನು ಬದ್ಧವಾದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 2014 ನೇ ಇಸವಿಯಿಂದ ದಾವಾಸ್ವತ್ತಿನಲ್ಲಿ ನಾನು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ)**
**5 ನೇ ಅ.ನ.ಸಿ.ಸಿ. ನ್ಯಾಯಾಧೀಶರು,**
**ಬೆಂಗಳೂರು ನಗರ.**